ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ

'ರಾಜ್ಯದಲ್ಲಿದೆ ಪ್ರತಿಭಾ ಸಮೂಹ'

ಪದವಿ ಪ್ರದಾನ ಸಮಾರಂಭದಲ್ಲಿ ಡಿಸಿಎಂ ಜಿ.ಪರಮೇಶ್ವರ

ಪ್ರಜಾವಾಣಿ ವಾರ್ತೆ

ಈಸ್ಟ್ ಪಾಯಿಂಟ್ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿಯ ಪದವಿ ಪ್ರದಾನ ಸಮಾರಂಭದಲ್ಲಿ ಜಿ. ಪರಮೇಶ್ವರ ಅವರನ್ನು ಸನ್ಮಾನಿಸಲಾಯಿತು

ಬೆಂಗಳೂರು: ವಿಶ್ವದ ಅತಿ ದೊಡ್ಡ ಪ್ರತಿಭಾ ಸಮೂಹವನ್ನು ಕರ್ನಾಟಕ ಹೊಂದಿರುವುದರಿಂದ ವಿವಿಧ ಕಂಪನಿಗಳು ಎರಡನೇ ಹಂತದ ನಗರಗಳಲ್ಲಿಯೂ ಹೂಡಿಕೆ ಮಾಡಲು ಉತ್ಸುಕವಾಗಿವೆ ಎಂದು ಉಪಮುಖ್ಯ ಮಂತ್ರಿ ಜಿ.ಪರಮೇಶ್ವರ ಹೇಳಿದರು.

ಈಸ್ಟ್ ಪಾಯಿಂಟ್ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿಯ ಪದವಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಭಾರತದಲ್ಲಿ ಸುಮಾರು 6,000 ಎಂಜಿನಿಯರಿಂಗ್ ಕಾಲೇಜುಗಳಿದ್ದು, ಪ್ರತಿ ವರ್ಷ ಸುಮಾರು 15 ಲಕ್ಷ ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಿದ್ದಾರೆ. ಸುಮಾರು 10 ಲಕ್ಷ ಎಂಜಿನಿಯರಿಂಗ್ ಪದವೀಧರರು ಹೊರಬರುತ್ತಿದ್ದಾರೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಎಂಜಿನಿಯರಿಂಗ್ ಪದವೀಧರರನ್ನು ತಯಾರಿಸುವ ದೇಶ ಇನ್ನೊಂದಿಲ್ಲ. ಭಾರತೀಯ ಪದವೀಧರರು ತಂತ್ರಜ್ಞಾನ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ಜಾಗತಿಕವಾಗಿ ಅತ್ಯುತ್ತಮ ಸಾಧನೆ ಮಾಡುತ್ತಿದ್ದಾರೆ ಎಂದರು.

ಮಾಹಿತಿ ತಂತ್ರಜ್ಞಾನದಲ್ಲಿ ಭಾರತವು ಜಾಗತಿಕ ನಾಯಕನಾಗಿ ಹೊರಹೊಮ್ಮಿದೆ. ಬೆಂಗಳೂರು ಮತ್ತು ಕರ್ನಾಟಕ ಪ್ರಮುಖ ಪಾತ್ರ ವಹಿಸಿವೆ. ಕರ್ನಾಟಕವು ದೇಶದ ಸ್ಟಾರ್ಟ್-ಅಪ್ ವ್ಯವಸ್ಥೆಯಲ್ಲಿ ಮುಂಚೂಣಿಯ ಲ್ಲಿದ್ದು, ಯುವ ಸಂಶೋಧಕರು ತಮ್ಮ ಆಲೋಚನೆಗಳನ್ನು ಪ್ರಾಯೋಗಿಕ ಪರಿಹಾರಗಳಾಗಿ ಪರಿವರ್ತಿಸಲು ನೆರವಾಗುತ್ತಿದ್ದಾರೆ. ನಿರ್ಧಾರ ಕೈಗೊಳ್ಳಿಕೆ ಮತ್ತು ಸಂಶೋಧನೆಯಲ್ಲಿ ಕೃತಕ ಬುದ್ಧಿಮತ್ತೆಯ ಪರಿವರ್ತನಾತ್ಮಕ ಶಕ್ತಿಯನ್ನು ಕಾಣಬಹುದು. ಏರೋಸ್ಪೇಸ್ ಮತ್ತು ರಕ್ಷಣಾ ತಂತ್ರಜ್ಞಾನದಲ್ಲಿ ಭಾರತದ ಬೆಳವಣಿಗೆಯದ್ದುತವಾಗಿದೆ ಎಂದರು.

ವಿದ್ಯಾನ ಪರಿಷತ್ ಸದಸ್ಯ ಕೆ.ಗೋವಿಂದರಾಜ್, ಈಸ್ಟ್ ಪಾಯಿಂಟ್ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ ಅಧ್ಯಕ್ಷ ಪಿ.ಎಲ್. ರಮಾದೇವಿ ವೆಂಕಟಾಚಲಿ, ಸಿಇಒ ಗಣೇಶ್ ಪ್ರಮೋದ್ ಗೌಡ ಮತ್ತು ರಾಜೇಶ್ ಗೌಡ, ಈಸ್ಟ್ ಪಾಯಿಂಟ್ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿಯ ಪ್ರಾಂಶುಪಾಲ ಪ್ರದೀಪ್ ಕುಮಾರ್ ದೀಕ್ಷಿತ್ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಸಾಂಸ್ಕೃತಿಕ. ಕ್ರೀಡೆ. ಸಾಹಿತ್ಯ ಚಟುವಟಿಕೆಗಳು, ವಿಚಾರ್ಷಿಕ ಮತ್ತು ವಾಣಿಜ್ಯ ವೇದಿಕೆ
ಉದ್ಘಾಟನೆ: ಆತಿಥಿ: ಆರ್.ಕೆ.ಸೃಜನ್, ಅಧ್ಯಕ್ಷತೆ: ಎನ್.ಪಿ.ಕಾರ್ತಿಕ್, ಉಸಸ್ಥಿತಿ: ಆರ್.ಪ್ರಶಾಂತ್, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರ ಸ್ವತಂತ್ರ ವಿಯಾ ಕಾಲೇಜು, ಶೇಷಾದ್ರಿಪುರ, ಮಧ್ಯಾಹ್ನ 12

'ಕೆಂಬೇಗೌಡ ಮತ್ತು ಕನ್ನಡಿಗರು' ಕುರುಪು ಉಪಸಾಮ್ಯ: ಜಣಗರಿಗೆ ವೆಂಕಟ ರಾಮಯ್ಯ, ಆತಿಥಿ: ರಾಮಣ್ಣ ಎಚ್. ಕೋಡಿಹೊಸಳ್ಳಿ, ಅಧ್ಯಕ್ಷತೆ: ಎಂ.ರಾಮಿಮ್ಮಯ್ಯ, ಆಯೋಜನೆ: ಕರ್ನಾಟಕ ಕ್ರೀಗಾರಿಕ ಮತ್ತು ವಾಣಿಜ್ಯೊದ್ಯಮ ಕನ್ನಡ ಸಂಘಗಳ ಒಕ್ಕೂಟ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಸಂಜೆ 4.30

'ಸಮಾಜಕಕ್ಕೆ, ಸ್ವಾಭಿಮಾನದ ಕ್ರಾಂತಿ ಸೂತ್ರೀತ ಸೆಲೆ ಪೆರಿಯಾರ್' ಕುರುಪು ಉಪಸಾಮ್ಯ: ಸೋಮಾ ಶಳಗೇರೆವನ್, ಅಧ್ಯಕ್ಷತೆ: ಕೆ.ಲಕಶೇಶ್, ಆಯೋಜನೆ: ಲೋಕಿಯಾ ಸಮತಾ ವಿದ್ಯಾಲಯ, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಸಂಜೆ 5

ಭರತನಾಟ್ಯ ಪ್ರದರ್ಶನ: ಸಮ್ಮುದಿ ಡಾನ್ ಫೌಂಡೇಷನ್ ವಿದ್ಯಾರ್ಥಿಗಳಿಂದ. ನಿರ್ದೇಶನ: ರಕ್ಷಿತಾ ರಘಪಾಠಾರ್, ಆಯೋಜನೆ ಮತ್ತು ಸ್ಥಳ: ನಂಜಸಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 5ನೇ ಬಡಾವಣೆ, ಬಿಯಾನಗರ, ಸಂಜೆ 5.15

ಅಂತರ ವಿಭಾಗ ನಾಟಕ ಸ್ಪರ್ಧೆ, 'ಕೆರೆಯ ಕೂಗು' ನಾಟಕ ಪ್ರದರ್ಶನ: ರಚನೆ: ಮಿ.ವಿಶಾಲ್‌ರಾಜ್, ನಿರ್ದೇಶನ: ಎನ್. ಎಂ.ರಾಜೇಶ್, ಆಯೋಜನೆ: ನಾಟಕ ಸಾಹಿತ್ಯ ಕೂಟ, ಸ್ಥಳ: ರಾಷ್ಟ್ರಕವಿ ಸಿದನೂರು ಕಲಾಕ್ಷೇತ್ರ, ಬಿಇಎಲ್ ಜಾಲಹಳ್ಳಿ, ಸಂಜೆ 6

ಗುರುವಂದನಾ, ಸಂಸ್ಕೃತಿಕ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಅನಂದ ಗುರೂಜಿ, ಅತಿಥಿ: ಸಿಶಿವಕುಮಾರಸ್ವಾಮಿ. ಅಧ್ಯಕ್ಷತೆ: ಸಿ.ಶಿವರಾಜು, ಉಸಸ್ಥಿತಿ: ಎಂ.ಆರ್. ಸತೀಶ, ಆಯೋಜನೆ: ಸಮ್ಮಿಲ ಪ್ರತಿಷ್ಠಾನ, ಸ್ಥಳ: ನಮನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 6

'ಹೊಂಬೆಳಕು-2026' ಪ್ರತಿಭಾ ಪುರಸ್ಕಾರ: ಉದ್ಘಾಟನೆ: ವಿಶ್ವಪ್ರಭುದೇವನ್, ಅಧ್ಯಕ್ಷತೆ ಎನ್.ಆರ್.ಪಂಡಿತಾರಾಧ್ಯ, ಅತಿಥಿ: ಪೂರ್ಣೇಶ ಪಿಕೃಷ್ಣ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರಂ ಸಂಜೆ ಕಾಲೇಜು, ಶೇಷಾದ್ರಿಪುರಂ. ಸಂಜೆ 6

26ನೇ ವರ್ಷದ ಪ್ರಮಟನ ವಾಸಿಸಿ: 'ತತ್ತಿಮೋಡ' ಕುರಿತು ಪ್ರವಚನ: ನಾರಾಯಣನಂದರ ಸರಸ್ವತಿ ಸ್ವಾಮೀಜಿ, ಆಯೋಜನೆ ಮತ್ತು ಸ್ಥಳ: ಸಾಂಸ್ಕೃತಿಕ ಮಂದಿರ, ರಾಗಿಗುಡ್ಡ ಶ್ರೀ ಪ್ರಸನ್ನ ಆಂಜನೇಯ ಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಬಿಯಾನಗರ 9ನೇ ಬಡಾವಣೆ. ಸಂಜೆ 6.30

'ಮಿತ್ರವೈಲ್ ಯಮಾಗಲ' ನಾಟಕ ಪ್ರದರ್ಶನ: ರಚನೆ: ಡಿ.ಕೆ.ಚೌಟಿ, ರಂಗ ರೂಪ: ಬಸವರಾಜ ಸುಳೆರಿಶಾಳ್, ನಿರ್ದೇಶನ: ರಾಜಗುರು ಹೊಸಕೋಟೆ, ಆಯೋಜನೆ: ರಂಗಪಯಣ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 6.30

ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ :07/Call-2/2026-27
ದಿನಾಂಕ: 27.07.2026 (KPPP PROTAL ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ 6 ಉಪ-ವಿಭಾಗಗಳ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳಿಗೆ (ಇವಾ ನಿಯಂತ್ರಣ ರಹಿತ- NON-AC-CAR) (ಚಿಕ್ಕಬಳ್ಳಾಪುರ, ಚಿಂತಾಮಣಿ, ಗೌರಿಬಿದನೂರು, ಬಾಗೇಪಲ್ಲಿ, ಶಿಡ್ಲಘಟ್ಟ ಮತ್ತು ಗುಡಿಬಂಡೆ) ಅಧಿಕೃತ ಸರ್ಕಾರಿ ಕೆಲಸಕ್ಕಾಗಿ ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಚಾಲಕ ಸಹಿತ ವಾಹನಗಳನ್ನು ಬಿಡಗೆಸಲು ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿ ಇರುವ ಮತ್ತು ಸ್ಥಂತ ಕಾರ್‌ಗಳನ್ನು ಹೊಂದಿರುವ KPPP PROTAL ನಲ್ಲಿ ನೊಂದಾಯಿಸಲ್ಪಟ್ಟ ಸರಬರಾಜುದಾರರು/ಟ್ರಾವೆಲ್ಸ್ ಏಜೆನ್ಸಿಗಳು ಇರಬಾರ ವೆಬ್‌ಸೈಟ್ **https://kppp.karnataka.gov.in/** ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು. (1) ಟೆಂಡರ್ ಪ್ರಶ್ನೆಗಳು/ಸ್ಪಷ್ಟೀಕರಣಗಳಿಗೆ ಕೊನೆಯ ದಿನಾಂಕ ಮತ್ತು ಸಮಯ **ದಿನಾಂಕ: 01.08.2026 ರಂದು ಸಂಜೆ 5.30 ಗಂಟೆವರೆಗೆ.** (2) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ **ದಿನಾಂಕ: 04.08.2026 ರಂದು ಸಂಜೆ 5.30 ಗಂಟೆವರೆಗೆ.** (3) ಭರ್ತಿ ಮಾಡಿದ ಟೆಂಡರ್‌ಗಳನ್ನು ತೆರೆಯುವ ದಿನಾಂಕ: **06.08.2026 ಬೆಳಗ್ಗೆ 11.00 ಗಂಟೆಗೆ (4)** ಆರ್ಥಿಕ ಬಿಡ್ಡನ್ನು ತೆರೆಯುವ **ದಿನಾಂಕ: 10.08.2026 ಬೆಳಗ್ಗೆ 11.00 ಗಂಟೆಗೆ.** ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟಿರೆ ಮುಂದಿನ ದಿನ ಟೆಂಡರ್ ತೆರೆಯಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ
ವಾಸಾಸಂಖಾ/ಚಿಕ್ಕಬಳ್ಳಾಪುರ/ಆರ್.ಟಿ.ಸಂಖ್ಯೆ:165/ಕೆಎಸ್‌ಎಂಸಿಎ/2026-27

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿ.ಐ.ಎನ್: U40109KA1999ಎಸ್‌ಜಿಪಿ025521)
ಸಂಖ್ಯೆ: ಪಸಾಇ(ವಿ)/ಪ್ರಕಾ/ಪಸಾಇ/ಕಾಇ/-4186-2026-4187-2026-27/3839-4216/3856-57 ದಿನಾಂಕ: 28.07.2026

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕಪಿಪ್ರನಿಯಿಂದ ಬಿಡ್ ಪಿಚಿಸಲಿಕೆ ಸಂಖ್ಯೆಗಳ ಅನ್ವಯ ಕೆಳಕಂಡ ಕಾಮಗಾರಿಗಳಿಗೆ **ಶೇಕಡವಾರು ದರ (Percentage Rate), ಭಾಗಶಃ: ಟರ್ನ್‌ಕೀ ಆಧಾರದ ಮೇಲೆ** ಬಿಡ್‌ಗಳನ್ನು ಆಹ್ವಾನಿಸಿ:

1) **ಕಪಿಪ್ರನಿ/ಮುಇಂವಿ/ಪ್ರ(ಕಾ)ವಿ/ಬೆಂವಿ/ಘಾ.ಟಿ.ಕಿ-11/2026-27**ರ ಅನ್ವಯ ಬೆಂಗಳೂರು ನಗರ ಜಿಲ್ಲೆಯ, ಯಲಹಂಕ ಪೊಲೀಸ್ ಸ್ಟೇಷನ್‌ನಿಂದ ಯಲಹಂಕ ನ್ಯೂ ಟೌನ್" BWSSB ಜಂಕ್ಷನ್ ಬೆಂಗಳೂರಿನ ಉತ್ತರ ನಗರ ಕಾರ್ಯೋಗ್ರೇಷನ್, ಬೆಂಗಳೂರು ಉತ್ತರ ನಗರ ಪಾಲಿಕೆಯವರ ಮೂಲಕ ನಿರ್ಮಿಸಿರುವ ರಾಂಪ್ ನಿರ್ಮಾಣಕ್ಕೆ ಆಡ್ಡಯಾಗುತ್ತಿರುವ, ಫೆಡರಲ್-ಮೋಗಲ್ ಗೊಟ್ಟೆ ಇಂಡಿಯಾ ಲಿಮಿಟೆಡ್ (Federal-Mogul Goetze India Limited), ದೊಡ್ಡಬಳ್ಳಾಪುರ ರಸ್ತೆ, ಯಿಲಹಂಕ ಎಯರಿನಲ್ಲಿರುವ 220/66/11kV ಪೂಟ್ಸೆನವಳ್ಳ ಸ್ಥಿಕರಣ ಕೇಂದ್ರದಿಂದ ಹಿಂದೂಡಾ ಉಪ-ಕೇಂದ್ರಕ್ಕೆ ಪ್ರಚೆರಿಕರಿಸುವ 66kV, 1000Sqmm EHV ಭೂಗತ ಕೇಬಲ್‌ಗಳ ಮತ್ತು 220/66/11kV ಪೂಟ್ಸೆನವಳ್ಳ ಸ್ಥಿಕರಣ ಕೇಂದ್ರದಿಂದ BDA ಅಕಾಡಾಮಿ ಉಪ-ಕೇಂದ್ರಕ್ಕೆ ಪ್ರಚೆರಿಸುವ 66kV, 1000Sqmm EHV ಭೂಗತ ಕೇಬಲ್‌ಗಳನ್ನು ಮರು ಮಾರ್ಗಗೊಳಿಸುವ ಕಾಮಗಾರಿಯ ಕೆಲಸಕ್ಕೆ ಸೇರಿದಂತೆ ಎಲ್ಲಾ ಸಿವಿಲೊಂದಿಯ ಸಾಮಗ್ರಿಗಳು/ ಉಪಕರಣಗಳ ಸರಬರಾಜು (66ಕೆ.ವಿ. 1000Sqmm EHV ಭೂಗತ ಕೇಬಲ್‌ಗಳ ಮತ್ತು Jointing kits ಗಳನ್ನು ಹೊರತುಪಡಿಸಿ) ಮತ್ತು ಎಲ್ಲಾ ಸಿವಿಲೊಂದಿಯ ಸಾಮಗ್ರಿಗಳು/ಉಪಕರಣಗಳ ಸ್ಥಾಪನೆ (ಸಿಎಲ್ ಕಾಮಗಾರಿಗಳನ್ನು ಒಳಗೊಂಡಂತೆ), ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವ ಕಾಮಗಾರಿ.

2) **ಕಪಿಪ್ರನಿ/ಮುಇಂವಿ/ಪ್ರ(ಕಾ)ವಿ/ಬೆಂವಿ/ಘಾ.ಟಿ.ಕಿ-07 (ಕರೆ-3)**ರ ಅನ್ವಯ ಬೆಂಗಳೂರು ದಕ್ಷಿಣ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ 66/11 ಕೆ.ವಿ ಅಕ್ಕೂರುಮೊಳೆ ವಿದ್ಯುತ್ ಉಪಕೇಂದ್ರದಲ್ಲಿ ಹಾಲಿ ಇರುವ 1x12.5 ಎಂ.ವಿ.ಎ ಪರಿವರ್ತಕವನ್ನು 1x20 ಎಂ.ವಿ.ಎ ಪರಿವರ್ತಕಕ್ಕೆ ಬದಲಾಯಿಸುವ ಕಾರ್ಯಕ್ಕೆ ಸಂಬಂಧಿಸಿದ ಎಲ್ಲಾ ಸರಬರೊಂದುವ ಸಾಮಗ್ರಿಗಳು/ ಉಪಕರಣಗಳ ಸರಬರಾಜು (20ಎಂ.ವಿ.ಎ ವಿದ್ಯುತ್ ಪರಿವರ್ತಕ, NIFPS system ಹಾಗೂ 11 ಕೆ.ವಿ ಛೀದಕಗಳನ್ನು ಹೊರತು ಪಡಿಸಿ) ಮತ್ತು ಎಲ್ಲಾ ಸಿವಿಲೊಂದಿಯ ಸಾಮಗ್ರಿಗಳು/ ಉಪಕರಣಗಳ ಸ್ಥಾಪನೆ (ಸಿಎಲ್ ಕಾಮಗಾರಿಗಳನ್ನು ಒಳಗೊಂಡಂತೆ) (20 ಎಂ.ವಿ.ಎ ವಿದ್ಯುತ್ ಪರಿವರ್ತಕ, NIFPS system ಹೊರತುಪಡಿಸಿ), ಪರೀಕ್ಷಿಸುವುದು ಮತ್ತು ಕಾರ್ಯಾರಂಭ ಗೊಳಿಸುವ ಬಗ್ಗೆ.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುತ್ತದೆ. ಇಂಟೆಂಡರಿಂಗ್ ಪ್ರಕ್ರಿಯೆಯಲ್ಲಿ ಸಂಬಂಧಿಸಿದ ವಿಚಾರಣೆಯ ಸಂಪೂರ್ಣ ವಿವರಗಳನ್ನು ಕೆಪಿಟಿಸಿ ಪೋರ್ಟಲ್ ವೆಬ್‌ಸೈಟ್ **www.kppp.karnataka.gov.in** ನಲ್ಲಿ **ಕ್ರ.ಸಂ.-1: ದಿನಾಂಕ: 03.08.2026 ಮತ್ತು ಕ್ರ.ಸಂ.-2: ದಿನಾಂಕ: 05.08.2026** ರಂದು ಅಥವಾ ತದನಂತರ ಲಾಗಿನ್ ಆಗಿ ಪಡೆಯಬಹುದು. ಇನ್ನಿತರೆ ವಿವರಗಳು ಕೆಳಕಂದಿರಾರ ಛಛೇರಿಯಿಂದ ಪಡೆಯಬಹುದು.

ಸಹಿ/- ಮುಖ್ಯ ಇಂಜಿನಿಯರ್ (ವಿದ್ಯುತ್)
ಪ್ರಸರಣ (ಕಾರ್ಯಾಚರಣೆ) ವಲಯ,
ಕಪಿಪ್ರನಿಯ, ಆನಂದರಾವ್ ವೃತ್ತ, ಬೆಂಗಳೂರು.

ಸಾಂಸ್ಕೃತಿಕ ಮುನ್ನೋಟ

'ಆದದ್ದೆಲ್ಲಾ ಒಳಿತೇ..?' ನಾಟಕ

'ಆದದ್ದೆಲ್ಲಾ ಒಳಿತೇ..?' ನಾಟಕದ ದೃಶ್ಯ

ಬೆಂಗಳೂರು: ಕ್ರಿಯೇಟಿವ್ ಥಿಯೇಟರ್ ವತಿಯಿಂದ ಆಗಸ್ಟ್ 2ರಂದು ಮಧ್ಯಾಹ್ನ 3.30 ಹಾಗೂ ಸಂಜೆ 7.30ಕ್ಕೆ ಜೆ.ಪಿ.ನಗರದ ರಂಗಶಂಕರದಲ್ಲಿ 'ಆದದ್ದೆಲ್ಲಾ ಒಳಿತೇ..?' ಹಾಸ್ಯ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ಈ ನಾಟಕವನ್ನು ಸಿಂದರ್ ಅವರು ರಚಿಸಿದ್ದು ಪ್ರಮೋದ್ ಶಿಗ್ಗಾಂವ್ ಅವರ ನಿರ್ದೇಶನವಿದೆ. ಕಲಾವಿದರಾದ ಲಕ್ಷ್ಮಿ ಚಂದ್ರಶೇಖರ್, ಸುಂದರ್, ರಾಮಲಿಕ್ಷ್ಮ ಕನ್ನಡಾಡಿ ಹಾಗೂ ಸೌಮ್ಯಾ ಗಂಗಾಧರ್ ಅವರು ರಂಗದ ಮೇಲೆ ಕಾಣಿಸಿಕೊಳ್ಳಲಿದ್ದಾರೆ. ಕೆ.ವೈ. ನಾರಾಯಣಸ್ವಾಮಿ ರಚಿಸಿದಾಗ ಗೀತೆಗೆ ಗಜಾನನ ಟಿ. ನಾಯಕ ಅವರು ಸಂಗೀತ ನೀಡಿದ್ದು, ಎಂ.ಡಿ. ಪಲ್ಲವಿ ಮತ್ತು ತಂಡದವರು ಹಾಡಿದ್ದಾರೆ.

ಮದ್ಯದ ವರ್ಗದ ಗಂಡ-ಹೆಂಡತಿ ನಡುವಿನ ದೈನಂದಿನ ಕಚ್ಚಾಟ, ಪೈಸೂರೀಟ, ಅವರ ಆತ್ಮೀಯ-ಮಾವನಗಿರಿಯ ಅಶಯಗಳು ತರುವ ತಾಪತ್ರಯಿ. ಕರ್ನಾಟಕದ ಸ್ಟ್ರಾಹಳ್ಳಿಯ ಹೆಣ್ಣೊಂದು ಬಹುಭಾಷಕರಿರುವ ಮುಂಬೈನ ಫ್ಲ್ಯಾಟ್‌ಗೆ ಭೇಟಿ ನೀಡಿದಾಗ ಆಗುವ ಅವಾಂತರಗಳು, ಸಂಪ್ರದಾಯಸ್ಥ ಮನೆತನದ ಹುಡುಗಿ ಪ್ರೇಮಿ ಹುಡುಗನನ್ನು ಮದುವೆಯಾಗಿ ಮನೆಗೆ ಕರೆತಂದಾಗ ಉಂಟಾಗುವ ಫಜೀತಿ ಈ ನಾಟಕದ ವಸ್ತು ಎಂದು ಆಯೋಜಕರು ತಿಳಿಸಿದ್ದಾರೆ.

'ಲಕ್ಷ್ಮೀ ಕಟಾಕ್ಷ' ನಾಟಕ

ಬೆಂಗಳೂರು: ಬೆಂಗಳೂರು ಪ್ರೇಯರ್ಸ್ ಥಿಯೇಟರ್ ಆಯೋಜನೆಯಲ್ಲಿ ಆಗಸ್ಟ್ 1ರಂದು ಸಂಜೆ 4.30 ಹಾಗೂ ಸಂಜೆ 7 ಗಂಟೆಗೆ ಸುಚಿತ್ರ ಫಿಲ್ಮ್ ಸ್ಟೂಡಿಯೊ ನಾಣಿ ಅಂಗಳದಲ್ಲಿ 'ಲಕ್ಷ್ಮೀ ಕಟಾಕ್ಷ' ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಕಿಶೋರ್ ಕುಮಾರ್ ಅವರು ಈ ನಾಟಕವನ್ನು ರಚಿಸಿ ನಿರ್ದೇಶಿಸಿದ್ದಾರೆ. ಸಾಮಾಜಿಕ-ರಾಜಕೀಯ ಕಥಾವಸ್ತುವನ್ನು ಒಳಗೊಂಡ ನಾಟಕ ಇದಾಗಿದೆ.

ಸಂಪರ್ಕಕ್ಕೆ: 9036751448

'ನೂಪುರ ಆರಾಧನೋತ್ಸವ

ಬೆಂಗಳೂರು: ನಾಟ್ಯ ನಿನಾದ ನೃತ್ಯಾಲಯ ಟ್ರಸ್ಟ್ ಇದೇ 31ರಂದು ಸಂಜೆ 6 ಗಂಟೆಗೆ ಜೆ.ಸಿ.ರಸ್ತೆಯಲ್ಲಿರುವ ಎಡಿಎ ರಂಗಮಂದಿರದಲ್ಲಿ ನೂಪುರ ಆರಾಧನೋತ್ಸವ ಹಮ್ಮಿಕೊಂಡಿದೆ.

ಚೇತನ್ ಗಂಗಟ್ಟಿ ಹಾಗೂ ಚಿಂದ್ರಪ್ರಭ ಚೇತನ್ ಅವರ ಶಿಷ್ಯರಾದ ಧಾತಿಶ್ರೀ ಎಂ., ಗುಂಜನ್ ಕುಲ್ಲನ್, ಹನ್ಸಿತಾ ಕೆ., ಶ್ರಾವ್ಯಾ, ಪ್ರಣವಿ ಬಿಗಗೀಶ್, ಸಂಯುಕ್ತಾ ಉಡಪಿ, ಸಾನ್ವಿ ಹರೀಶ್, ಯುಕ್ತಿ ಎನ್. ಅವರು ಶಾಸ್ತ್ರೀಯ ನೃತ್ತ ಪ್ರಸ್ತುತಪಡಿಸಿದ್ದಾರೆ. ಅರ್ಥ ನೃತ್ತ ಕಲಾಮಂದಿರದ ಸ್ನಿತಾ ಶ್ರೀಪತಿ ಅವರು ಅತಿಥಿಯಾಗಿ ಭಾಗವಹಿಸಿದ್ದಾರೆ.

'ಪಂಡಿತ್ ಶೇಷಾದ್ರಿ ಗವಾಯಿ'